# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 233 |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 28.01.2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪೋಡಿ ಇತ್ಯರ್ಥ ಪ್ರಕ್ರಿಯೆ ಅತೀ ವಿಳಂಬವಾಗುತ್ತಿದ್ದು, ಮೋಜಿಣಿ ತಂತ್ರಾಂಶಕ್ಕೆ ಸರ್ವರ್ ಸಮಸ್ಯೆ ಇಲಾಖೆ ಯಲ್ಲಿ ಪೋಡಿಗೆಂದೆ ಪ್ರತ್ಯೇಕ ತಂಡವಿಲ್ಲದಿರುವುದು ಸೇರಿದಂತೆ ಹಲವಾರು ತೊಡಕುಗಳ ಕಾರಣದಿಂದಾಗಿ ಬಹುತೇಕ ಪ್ರಕರಣಗಳು ದೀರ್ಘಕಾಲದಿಂದ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಭೂಮಾಪನ ಇಲಾಖೆಯಲ್ಲಿ ಮೋಜಿಣಿ ತಂತ್ರಾಂಶಕ್ಕೆ ಸಂಬಂಧಿಸಿದಂತೆ ಸರ್ವರ್ ಸಮಸ್ಯೆ ಇರುವುದಿಲ್ಲ ಮತ್ತು ಭೂಮಿ ತಂತ್ರಾಂಶ ಅಭಿವೃದ್ಧಿ ಮತ್ತು ನಿರ್ವಹಣೆ ಮಾಡುತ್ತಿರುವ ತಂಡದಲ್ಲಿ ಮೋಜಿಣಿ ತಂತ್ರಾಂಶದ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಪ್ರತ್ಯೇಕ ತಂಡವನ್ನು ನಿಯೋಜಿಸಲಾಗಿರುತ್ತದೆ.<br><br>ಇಲಾಖೆಯಲ್ಲಿ ಪೋಡಿ ಕಾರ್ಯಕ್ಕಾಗಿ ಪ್ರತ್ಯೇಕ ಭೂಮಾಪಕರ ತಂಡವಿರುವುದಿಲ್ಲ, ಆದರೆ ಇಲಾಖೆಯಲ್ಲಿ ಜಾರಿಯಲ್ಲಿರುವ ದರಖಾಸ್ತು ಪೋಡಿ ಆಂದೋಲನ, ಸ್ವಾಮಿತ್ವ, ನಕ್ಷಾಯೋಜನೆ, ಕಂದಾಯ ಅರಣ್ಯ ಜಮೀನು ಅಳತೆ ಇತ್ಯಾದಿ ಪ್ರಮುಖ ಯೋಜನೆಗಳ ಜೊತೆಯಲ್ಲಿ ಲಭ್ಯ ಭೂಮಾಪಕರನ್ನು ಬಳಸಿಕೊಂಡು ಪ್ರಥಮ ಆದ್ಯತೆಯಾಗಿ ಸಾರ್ವಜನಿಕರು ಶುಲ್ಕ ಪಾವತಿಸಿ ಸಲ್ಲಿಸುವ ದರಖಾಸ್ತು ಪೋಡಿ, ತತ್ಕಾಲ್ ಪೋಡಿ, ಪೋಡಿ ಮುಕ್ತ ಗ್ರಾಮ ಯೋಜನೆ, ಬಗರ್ ಹುಕುಂ ಪೋಡಿ, ಕೋರ್ಟ್ ಆದೇಶ ಇತ್ಯಾದಿ ಪ್ರಕರಣಗಳನ್ನು ಅಳತೆ ಮಾಡಲಾಗುತ್ತಿದೆ.<br><br>ಪೋಡಿ ಪ್ರಕರಣಗಳು ಬಾಕಿ ಇರಲು ಪ್ರಮುಖ ಕಾರಣಗಳು ಈ ಕೆಳಗಿನಂತಿವೆ:-<br>1. ಆಕಾರಬಂದು & ಪಹಣಿ ಕಾಲಂ 3 ರ ವಿಸ್ತೀರ್ಣದ ವ್ಯತ್ಯಾಸಗಳಿರುವುದು;<br>2. ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು, ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು;<br>3. ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ನ್ಯಾಯಾಲಯದಲ್ಲಿ ವ್ಯಾಜ್ಯಗಳು ಇರುವುದು.<br>4. ಪೋಡಿ ಅಂದೋಲನದ ಅರಿವಿನಿಂದಾಗಿ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾಗುತ್ತಿರುವುದು |

<table>
<tr>
<td>ಆ)</td>
<td>ಬಂದಿದ್ದಲ್ಲಿ, ರಾಜ್ಯಾದ್ಯಂತ ಪ್ರಸ್ತುತ ಪೋಡಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು:<br>(ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು)</td>
<td>ರಾಜ್ಯದಲ್ಲಿ ಮೋಜಿಣಿ ತಂತ್ರಾಂಶದಲ್ಲಿ ತತ್ಕಾಲ್ ಪೋಡಿ, ಪೋಡಿ ಮುಕ್ತ ಗ್ರಾಮ ಯೋಜನೆ, ಬಗರ್ ಹುಕುಂ ಪೋಡಿ ಮತ್ತು ಕೋರ್ಟ್ ಆದೇಶದಂತೆ ಪೋಡಿಗೆ ಸಂಬಂಧಿಸಿದಂತೆ ಕೋರಿ ಅರ್ಜಿಗಳು ಸ್ವೀಕೃತವಾಗಿದ್ದು, ಬಾಕಿಯಿರುವ ವಿವಿದ ತರಹದ ಪೋಡಿ ಪ್ರಕರಣಗಳ ವಿವರ ಈ ಕೆಳಗಿನಂತಿದೆ:-
<table>
<tr><th>ಪೋಡಿಯ ತರಹೆ</th><th>ಒಟ್ಟು ಬಾಕಿ</th><th>ಕಂದಾಯ ಶಾಖೆಯಲ್ಲಿ ಬಾಕಿ</th><th>ಭೂ ಮಾಪನ ಶಾಖೆಯಲ್ಲಿ ಬಾಕಿ</th></tr>
<tr><td>ದರಖಾಸ್ತು ಪೋಡಿ</td><td>24,226</td><td>0</td><td>24,226</td></tr>
<tr><td>ತತ್ಕಾಲ್ ಪೋಡಿ</td><td>1,32,947</td><td>62,092</td><td>70,855</td></tr>
<tr><td>ಪೋಡಿ ಮುಕ್ತ ಗ್ರಾಮ ಯೋಜನೆ</td><td>73,919</td><td>33,834</td><td>40,085</td></tr>
<tr><td>ಕೋರ್ಟ್ ಪೋಡಿ</td><td>3,579</td><td>1021</td><td>2558</td></tr>
<tr><td>ಬಗರ್ ಹುಕುಂ ಪೋಡಿ</td><td>143</td><td>63</td><td>80</td></tr>
<tr><td>ಒಟ್ಟು</td><td>2,34,814</td><td>97,010</td><td>1,37,804</td></tr>
</table>
ಜಿಲ್ಲಾವಾರು ವಿವರವನ್ನು ಅನುಭಂದ-1 ರಲ್ಲಿ ಲಗತ್ತಿಸಿದೆ.</td>
</tr>
<tr>
<td>ಇ)</td>
<td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಡಿ ಇತ್ಯರ್ಥದ ಅತೀ ಹೆಚ್ಚು ಪ್ರಕರಣಗಳು ದೀರ್ಘಕಾಲದಿಂದ ಬಾಕಿ ಇದ್ದು, ಜಿಲ್ಲೆಯಲ್ಲಿ ಪೋಡಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;</td>
<td>ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಕಿಯಿರುವ ಪೋಡಿ ಪ್ರಕರಣಗಳ ವಿವರ ಈ ಕೆಳಕಂಡಂತಿದೆ:-
<table>
<tr><th>ಪೋಡಿಯ ತರಹೆ</th><th>ಒಟ್ಟು ಬಾಕಿ</th><th>ಕಂದಾಯ ಶಾಖೆಯಲ್ಲಿ ಬಾಕಿ</th><th>ಭೂ ಮಾಪನ ಶಾಖೆಯಲ್ಲಿ ಬಾಕಿ</th></tr>
<tr><td>ದರಖಾಸ್ತು ಪೋಡಿ</td><td>14853</td><td>0</td><td>14853</td></tr>
<tr><td>ತತ್ಕಾಲ್ ಪೋಡಿ</td><td>5094</td><td>3091</td><td>2003</td></tr>
<tr><td>ಪೋಡಿ ಮುಕ್ತ ಗ್ರಾಮ ಯೋಜನೆ</td><td>2848</td><td>1760</td><td>1088</td></tr>
<tr><td>ಕೋರ್ಟ್ ಪೋಡಿ</td><td>59</td><td>24</td><td>35</td></tr>
<tr><td>ಬಗರ್ ಹುಕುಂ ಪೋಡಿ</td><td>10</td><td>0</td><td>10</td></tr>
<tr><td>ಒಟ್ಟು</td><td>22864</td><td>4875</td><td>17989</td></tr>
</table></td>
</tr>
</table>

| | | |
|---|---|---|
| ಈ) | ಜಿಲ್ಲೆಯಲ್ಲಿ ಪೋಡಿ ಇತ್ಯರ್ಥಕ್ಕೆ ಸಲ್ಲಿಕೆಯಾಗಿರುವ ಬಹುತೇಕ ಅರ್ಜಿಗಳು ಅತೀ ದೀರ್ಘ ಕಾಲದಿಂದ ಹಾಗೆಯೇ ಬಾಕಿ ಉಳಿದಿದ್ದು ಯಾವ ಕಾಲಮಿತಿಯೊಳಗೆ ಜಿಲ್ಲೆಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ವಿಲೇ ವಾರಿ ಮಾಡಲಾಗುವುದು? | ಬಾಕಿಯಿರುವ ವಿವಿಧ ಪೋಡಿ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ.<br>1. ದರಖಾಸ್ತು ಪೋಡಿ ಕುರಿತಂತೆ ನಮೂನೆ 01 ರಿಂದ 05 ಮತ್ತು 06 ರಿಂದ 10 ಗಳ ಭರ್ತಿ ಮತ್ತು ದೃಡೀಕರಿಸುವ ಪ್ರಕ್ರಿಯೆಯನ್ನು ಸರ್ಕಾರದ ಆದೇಶ ಸಂ: ಕಂಇ 156 ಎಸ್‌ಎಸ್‌ಎಂ 2024 ದಿನಾಂಕ 25-11-2024ರಡಿ ಸರಳೀಕರಿಸಿ, ಸ.ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ಪೋಡಿ ದುರಸ್ತಿ ಪಡಿಸಲು ಆದೇಶಿಸಿದೆ.<br>2. ಈ ಹಿಂದೆ ಯಾವುದೇ ಭೂಮಂಜೂರಿ ಕಡತದಲ್ಲಿ ಪೋಡಿಗೆ ಅಗತ್ಯವಿದ್ದ ಕನಿಷ್ಠ 5 ದಾಖಲೆಗಳನ್ನು 3 ಕ್ಕೆ ಇಳಿಸಲಾಗಿದೆ.<br>3. ದರಖಾಸ್ತು ಪೋಡಿ ಪ್ರಕರಣಗಳಲ್ಲಿ ನಮೂನೆ 01 ರಿಂದ 05 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಆನ್‌ಲೈನ್‌ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ.<br>4. ದರಖಾಸ್ತು ಪೋಡಿ, 11ಇ, ಹದ್ದುಬಸ್ತು ಮುಂತಾದ ಎಲ್ಲಾ ತರಹದ ಅರ್ಜಿಗಳನ್ನು ಸರ್ಕಾರಿ ಭೂಮಾಪಕರೊಂದಿಗೆ ಪರವಾನಗಿ ಭೂಮಾಪಕರನ್ನು ಸಹ ಬಳಸಿಕೊಂಡು ಅಳತೆ ಮಾಡಲು ಆದೇಶಿಸಿದೆ.<br>5. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್ ನಲ್ಲಿ ಸ್ವೀಕರಿಸಲಾಗುತ್ತಿದ್ದು ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ತಂತ್ರಾಂಶದ ಮುಖಾಂತರ ಆನ್‌ಲೈನ್ನಲ್ಲೇ ಸರದಿ ಸಾಲಿನಂತೆ (FIFO) ನಿರ್ವಹಿಸುವ ಮೂಲಕ, |

| | | |
|---|---|---|
| | | ಪ್ರಕರಣಗಳ ವಿಲೆವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.<br>6. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>7. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>8. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮೇಲಿನಂತೆ, ಪೋಡಿ ಇತ್ಯರ್ಥಕ್ಕೆ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಹಂತ ಹಂತವಾಗಿ ವಿಲೇವಾರಿ ಮಾಡಲು ಕ್ರಮ ಕ್ರಮ ವಹಿಸಲಾಗುತ್ತಿದೆ. |

**ಸಂಖ್ಯೆ: ಕಂಇ 15 ಎಸ್ಎಸ್‌ಸಿ 2026**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

| ಅನುಭಂದ -1 | | | | | | | LCQ 233 |
|---|---|---|---|---|---|---|---|
| ರಾಜ್ಯದಲ್ಲಿ ಪ್ರಸ್ತುತ ಪೋಡಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳ ಜಿಲ್ಲಾವಾರು ವಿವರ | | | | | | | |
| ಕ್ರ | ಜಿಲ್ಲೆ | ಬಾಕಿಯಿರುವ ವಿವಿದ ತರಹದ ಪೋಡಿ ಪ್ರಕರಣಗಳ | | | | | |
| | | ತತ್ಕಾಲ್ ಪೋಡಿ | ಪೋಡಿ ಮುಕ್ತ ಗ್ರಾಮ ಯೋಜನೆ | ಕೋರ್ಟ್ ಪೋಡಿ | ಬಗರ್ ಹುಕುಂ ಪೋಡಿ | ದರಖಾಸ್ತು ಪೋಡಿ | ಒಟ್ಟು |
| 1 | ಉಡುಪಿ | 5275 | 1006 | 158 | 43 | 2457 | 8939 |
| 2 | ಉತ್ತರಕನ್ನಡ | 1475 | 1205 | 14 | 33 | 234 | 2961 |
| 3 | ಕೊಡಗು | 204 | 1743 | 0 | 0 | 144 | 2091 |
| 4 | ಕೊಪ್ಪಳ | 3446 | 2218 | 175 | 8 | 59 | 5906 |
| 5 | ಕೋಲಾರ | 6766 | 1097 | 228 | 0 | 481 | 8572 |
| 6 | ಗದಗ | 1133 | 1447 | 32 | 0 | 0 | 2612 |
| 7 | ಗುಲ್ಬರ್ಗ | 5139 | 3085 | 132 | 0 | 15 | 8371 |
| 8 | ಚಾಮರಾಜನಗರ | 1462 | 1404 | 30 | 12 | 44 | 2952 |
| 9 | ಚಿಕ್ಕಬಳ್ಳಾಪುರ | 4175 | 883 | 142 | 0 | 83 | 5283 |
| 10 | ಚಿಕ್ಕಮಗಳೂರು | 4080 | 576 | 97 | 0 | 126 | 4879 |
| 11 | ಚಿತ್ರದುರ್ಗ | 3796 | 3951 | 129 | 0 | 121 | 7997 |
| 12 | ತುಮಕೂರು | 11915 | 3510 | 687 | 5 | 1802 | 17919 |
| 13 | ದಕ್ಷಿಣ ಕನ್ನಡ | 5094 | 2848 | 59 | 10 | 14853 | 22864 |
| 14 | ದಾವಣಗೆರೆ | 3363 | 4440 | 41 | 0 | 65 | 7909 |
| 15 | ಧಾರವಾಡ | 1145 | 881 | 8 | 0 | 0 | 2034 |
| 16 | ಬಳ್ಳಾರಿ | 1683 | 948 | 4 | 0 | 16 | 2651 |
| 17 | ಬಾಗಲಕೋಟೆ | 1093 | 3021 | 8 | 0 | 0 | 4122 |
| 18 | ಬಿಜಾಪುರ | 3328 | 3250 | 44 | 0 | 2 | 6624 |
| 19 | ಬೀದರ್ | 5070 | 2814 | 64 | 0 | 4 | 7952 |
| 20 | ಬೆಂಗಳೂರು ಗ್ರಾ | 4276 | 1535 | 108 | 0 | 529 | 6448 |
| 21 | ಬೆಂಗಳೂರು ಜಿಲ್ಲೆ | 6579 | 0 | 28 | 0 | 24 | 6631 |
| 22 | ಬೆಂಗಳೂರು ದಕ್ಷಿಣ | 5643 | 3260 | 101 | 3 | 4 | 9011 |
| 23 | ಬೆಳಗಾವ | 6670 | 3086 | 339 | 0 | 0 | 10095 |
| 24 | ಮಂಡ್ಯ | 9291 | 4699 | 194 | 8 | 240 | 14432 |
| 25 | ಮೈಸೂರು | 6228 | 3801 | 141 | 0 | 180 | 10350 |
| 26 | ಯಾದಗಿರ್ | 2778 | 3913 | 132 | 0 | 0 | 6823 |
| 27 | ರಾಯಚೂರು | 6247 | 3561 | 144 | 0 | 44 | 9996 |
| 28 | ವಿಜಯನಗರ | 2084 | 534 | 53 | 0 | 227 | 2898 |
| 29 | ಶಿವಮೊಗ್ಗ | 5018 | 2237 | 65 | 0 | 19 | 7339 |
| 30 | ಹಾವೇರಿ | 1263 | 4874 | 19 | 8 | 14 | 6178 |
| 31 | ಹಾಸನ | 7228 | 2092 | 203 | 13 | 2439 | 11975 |
| | **ಒಟ್ಟು** | **1,32,947** | **73,919** | **3,579** | **143** | **24,226** | **2,34,814** |



File No. RD/15/SSC/2026-RD_SSLR-REVENUE DEPATMENT SEC (Computer No. 2052138)
Generated from eOffice by JAYBHEEM, RD-SA(JB)-sslr, SENIOR ASSISTANT, REVENUE DEPARTMENT SEC on 28/01/2026 01:10 PM